## ಕೊರೊನಾ ಟೆಸ್ಟ್

ಲಾಕ್‌ಡೌನ್ ಸಮಯದಲ್ಲಿ ಮಕ್ಕಳಿಗೆ ಮನರಂಜನೆಯ ಜೊತೆಗೆ ಸ್ವಲ್ಪ ಸಾಮಾನ್ಯ ಜ್ಞಾನವೂ ಬೆಳೆಯಲಿ ಎಂದು ಚಿಕ್ಕಮ್ಮ ಮಕ್ಕಳೊಂದಿಗೆ ರಾಮಾಯಣ ಚಿತ್ರವನ್ನು ನೋಡುತ್ತಿದ್ದರು. ಬಹಳ ಕುತೂಹಲಕಾರಿಯಾದ ಯುದ್ಧ ಸನ್ನಿವೇಶವಿತ್ತು. ರಾವಣನ ಕಡೆಯವರೆಲ್ಲಾ ಒಬ್ಬೊಬ್ಬರಾಗಿ ಸೋಲು ಅನುಭವಿಸುತ್ತಿರುವಾಗ, ರಾವಣನ ಆಣತಿಯಂತೆ ಕುಂಭಕರ್ಣನನ್ನು ಎಬ್ಬಿಸಲು ಶತ ಪ್ರಯತ್ನ ಮಾಡಿದರೂ ಅವನು ಎಚ್ಚರವಾಗದೇ ಇದ್ದಾಗ, ಗದಾಪ್ರಹಾರ ಇತ್ಯಾದಿ ಮಾಡುತ್ತಾ, ಮೂಗಿನೊಳಗೆ ದೊಡ್ಡ ಬಾಣದಂತಹದನ್ನು ತೂರಿಸಿ ಎಚ್ಚರಗೊಳಿಸಲು ಯತ್ನಿಸುತ್ತಿರುವ ದೃಶ್ಯ ಅದು. ಚಿಕ್ಕಮ್ಮನ ಪಕ್ಕದಲ್ಲಿ ಕುಳಿತಿದ್ದ ಪುಟ್ಟ ದೀಪೂ ಅಮ್ಮನ ಕೈಹಿಡಿದು ಅಲುಗಾಡಿಸುತ್ತಾ, 'ಅಮ್ಮ... ಕುಂಭಕರ್ಣನಿಗೂ ಕೊರೊನಾ ಟೆಸ್ಟ್ ಮಾಡ್ತಿದಾರಾ?' ಅಂದಾಗ ಅಲ್ಲಿದ್ದವರೆಲ್ಲರೂ ಹೊಟ್ಟೆ ಹುಣ್ಣಾಗುವಂತೆ ನಕ್ಕರು.



**ಸುಮನಾ**

## ಮೂಗ್ಬಾಯಿ ಚೆಡ್ಡಿ



ಲಾಕ್‌ಡೌನ್ ವೇಳೆ ದಿನಬಳಕೆಯ ಅಗತ್ಯ ವಸ್ತು ಖರೀದಿಗೆ ಸರತಿ ಸಾಲಲ್ಲಿ ಕಾಯಬೇಕಿತ್ತು. ಅದಕ್ಕೆ ಅಂಗಡಿ ಮಾಲೀಕ ಪರಿಚಯದ ಸುದೇಶ್ ಅವರಿಗೆ ಹಿಂದಿನ ದಿನವೇ ಅಗತ್ಯ ವಸ್ತುಗಳ ಲಿಸ್ಟ್ ಅನ್ನು ವಾಟ್ಸ್‌ಆ್ಯಪ್‌ಗೆ ಕಳಿಸುತ್ತಿದ್ದೆವು. ಅವರು ಮರುದಿನ ಬೆಳಗ್ಗೆ ಸಾಮಗ್ರಿಗಳನ್ನು ರೆಡಿ ಇಟ್ಟು ಫೋನ್ ಮಾಡುತ್ತಿದ್ದರು. ಒಮ್ಮೆ, 'ನೀವು ವಾಟ್ಸ್‌ಆ್ಯಪ್ ಮಾಡಿದ ಎಲ್ಲಾ ಸಾಮಗ್ರಿಗಳನ್ನು ಪ್ಯಾಕ್ ಮಾಡಿ ಇಟ್ಟಿದ್ದೀವಿ. ಕೊನೆಯ ಐಟಂ 'ಮೂಗ್ಬಾಯಿ ಚೆಡ್ಡಿ–6' ಏನೆಂದು ಗೊತ್ತಾಗಿಲ್ಲ' ಎಂದರು. ನಮ್ಮ ನಾದಿನಿ ಮಗ ಶ್ರೀನಿಧಿ ಲಿಸ್ಟ್ ಬರೆದಿದ್ದ. ಅವನನ್ನೇ ಕೇಳಿದೆವು. 'ಆರು ಮಾಸ್ಕ್ ಅಂತ ಹೇಳಿದ್ರಲ್ಲ, ಅದನ್ನ ಕನ್ನಡದಲ್ಲಿ ಮೂಗ್ಬಾಯಿ ಚೆಡ್ಡಿ–6 ಅಂತ ಬರೆದೆ, ಅಷ್ಟೆ' ಎಂದು ವಿವರಿಸಿದ!

**ನಗರ ಗುರುದೇವ್ ಭಂಡಾರ್ಕರ್**

ಕಲೆ: ಗಣೇಶ ಆಚಾರ್ಯ